ದುರುಪಯೋಗ ಮಾಡಿಕೊಳ್ಳಲಾರರು ಎನ್ನುವ ತರ್ಕವೂ ವಕೀಲರ ವಾದಗಳಲ್ಲಿದೆ.

ಈ ಅಹವಾಲು ಅತ್ಯಂತ ನ್ಯಾಯಯುತವಾಗಿ ಕಂಡರೂ, ಸುಪ್ರೀಂ ಕೋರ್ಟ್ ಇದನ್ನು ಅಂಗೀಕರಿಸಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ, ಕಾನೂನನ್ನು ತಂದರೂ ಅದನ್ನು ಪಾಲಿಸುವವರ ಮೇಲೆ ಅವಿರತ ಕಣ್ಣಿಡಬೇಕಾಗುತ್ತದೆ ಎನ್ನುತ್ತದೆ. ಕಾನೂನನ್ನು ಪಾಲಿಸಬೇಕು ಎಂಬ ಒಂದೇ ಭಯದ ಕಾರಣ, ಉದ್ಯೋಗದಾತರು ನಾನಾ ಕಾರಣಗಳನ್ನು ಕೊಟ್ಟು ಮಹಿಳೆಯರನ್ನು ಕೆಲಸಕ್ಕೆ ಸೇರಿಸಿಕೊಳ್ಳದಿರಬಹುದು. ಹೊಟ್ಟೆಪಾಡಿಗಾಗಿ ಮಹಿಳೆಯರು ಅನಧಿಕೃತವಾಗಿ ತಮ್ಮನ್ನು ತಾವೇ ಶೋಷಿಸಿಕೊಳ್ಳಬಹುದು. ವೇತನವಿರದಿದ್ದರೆ, ಮಹಿಳೆಯರು ರಜಾದ ದುರುಪಯೋಗ ಪಡಿಸಿಕೊಳ್ಳದಿದ್ದರೂ, ಸಣ್ಣ ಉದ್ಯಮಗಳು ಕೆಲಸದ ಹರಿವು ತುಂಡಾದರೆ ನಷ್ಟವನ್ನು ಅನುಭವಿಸಬಹುದು. ಹಾಗಾಗಿ ಅಂತಹ ಒಂದು ಕಾನೂನು, ಲಾಭದ ಬದಲಿಗೆ ದೇಶದ ಶೇ. 75 ಬಡ ಮಹಿಳೆಯರಿಗೆ ಹೆಚ್ಚಿನ ಹಾನಿಯನ್ನೇ ಉಂಟುಮಾಡಬಹುದು ಎನ್ನುವುದು ಕೋರ್ಟಿನ ಅಸಹಾಯಕತೆಯ ಮೂಲವಾಗಿದೆ.

ಉದ್ಯಮಿಗಳು ಮತ್ತು ಸಂಸ್ಥೆಗಳು ಪರಿಗಣಿಸಬೇಕಾದ ವಿಚಾರದಲ್ಲಿ ನ್ಯಾಯಾಲಯಗಳು ಮೂಗು ತೂರಿಸುವುದು ಸರಿಯಲ್ಲ ಎಂದೂ ಹೇಳಲಾಗಿದೆ. ಈ ವಿಚಾರವನ್ನು ಆಯಾ ರಾಜ್ಯಗಳು ತಮಗೆ ಸಂಬಂಧಿಸಿದ ಸಂಸ್ಥೆ–ಉದ್ಯಮಿಗಳೊಂದಿಗೆ ಚರ್ಚಿಸಿ ಎಲ್ಲರಿಗೂ ಅನುಕೂಲವಾಗುವ ಒಂದು ನೀತಿಸಂಹಿತೆಯನ್ನು ಸೃಷ್ಟಿಸುವುದು ಉತ್ತಮ ಎಂಬ ಸಲಹೆಯನ್ನು ನ್ಯಾಯಾಲಯ ನೀಡಿದೆ.

ಇದೀಗ ಆಯಾ ರಾಜ್ಯಗಳ ಸಂಬಂಧಪಟ್ಟ ಸಚಿವಾಲಯಗಳು ಮಾದರಿ ಸಂಹಿತೆಯನ್ನು ರೂಪಿಸಲು ಕ್ರಮಗಳನ್ನು ಕೈಗೊಳ್ಳಬೇಕಿದೆ. ಕರ್ನಾಟಕ ಈ ನಿಟ್ಟಿನಲ್ಲಿ ಅಂತಿಮ ಹಂತದ ಚರ್ಚೆಯನ್ನು ನಡೆಸುತ್ತಿದೆ.


ಸ್ಯಾನಿಟರಿ ಪ್ಯಾಡ್ ಬಳಕೆಯ ಕುರಿತಂತೆ ಮಹಿಳೆಯರ ನಡುವೆ ಮಾಹಿತಿ ವಿನಿಮಯ

## ಸಮಾಜದ ನಿಲುವು ಬದಲಿಸುವುದು ಹೇಗೆ?

‘ಮಗಳು ಕಂಪ್ಯೂಟರ್ ಸೈನ್ಸ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾಳೆ. ಮೂರು ದಿನ ಆಚೆ ಕೂರಲು ತಯಾರಿದ್ದಾಳೆ ಅಂದರೂ ನಮ್ಮ ಜಾತಿಯ, ನಮ್ಮ ಪಂಗಡದ ಹುಡುಗರು ಸಿಗುತ್ತಿಲ್ಲ’ ಎಂದು ಇತ್ತೀಚೆಗೆ ಯಾರೋ ಹೇಳಿದರು. ಇದು ಭಾರತದ ಸಾಮಾಜಿಕ ಸ್ಥಿತಿಗತಿಯ ಒಂದು ತುಣುಕು.

ಒಂದೆಡೆ ಸ್ತ್ರೀಯರು ಶಿಕ್ಷಣ ಪಡೆಯುತ್ತಿದ್ದಾರೆ. ಉದ್ಯೋಗದಲ್ಲಿಯೂ ಇದ್ದಾರೆ. ಆದರೆ, ಮುಟ್ಟಿನ ವಿಚಾರ ಬಂದಾಗ ಸಮುದಾಯ, ಸಂಪ್ರದಾಯದ ಆಚೆಗೆ ಅವರು ಕಾಲಿಡಲು ಸ್ವತಂತ್ರರಲ್ಲ. ದೊಡ್ಡ ನಗರಗಳ ಹೊರಗಣ ಚಿತ್ರ ಬದಲಾಗುತ್ತಿದ್ದರೂ, ಒಳಗಣ ಹೂರಣ, ಕಲಸುಮೇಲೋಗರ ಸ್ಥಿತಿಯಲ್ಲಿದೆ. ಕಂಪ್ಯೂಟರ್‌ಗಳಲ್ಲಿ ಪ್ರಪಂಚವನ್ನೇ ಅಲುಗಾಡಿಸಿದರೂ, ‘ಮಾಸಿಕ ಋತುಸ್ರಾವ ಒಂದು ಸಹಜ ಕ್ರಿಯೆ, ಅದು ಅಶುದ್ಧವಲ್ಲ, ಅಪದ್ಧವಲ್ಲ’ ಎನ್ನಲು ಮಹಿಳೆಯರ ದನಿಗೆ ಶಕ್ತಿಯಿಲ್ಲ. ಹಾಗೆ ಅನ್ನುವವರನ್ನು ಸಮುದಾಯ ಬಹಿಷ್ಕರಿಸುವ ಭಯದಲ್ಲಿಯೇ ಬದುಕುವ ಅವಸ್ಥೆ ವಿದ್ಯಾವಂತರಲ್ಲಿಯೂ ಇದೆ. ಶಿಕ್ಷಣ, ಉದ್ಯೋಗ, ಆರ್ಥಿಕ ಸ್ವಾತಂತ್ರ್ಯ, ಸಮಾಜದ ಬೆಂಬಲ, ಯಾವುದೂ ಇರದ ಭಾರತೀಯ ಮಹಿಳೆಯ ಸ್ಥಿತಿ ದಾರುಣವಾಗಿದೆ.

ಒಂದು ಅಧ್ಯಯನದ ಪ್ರಕಾರ, ಭಾರತದ 2.5 ಕೋಟಿ ಮಹಿಳೆಯರು ಎಂಡೊಮೆಟ್ರಿಯಾಸಿಸ್ ಎಂಬ ತೊಂದರೆಯಿಂದ ಬಳಲುತ್ತಿದ್ದಾರೆ. ಶೇ. 20 ಮಹಿಳೆಯರಿಗೆ ಪಾಲಿಸಿಸ್ಟಿಕ್ ಓವರಿ ಲಕ್ಷಣಗಳಿವೆ. ಈ ತೊಂದರೆಗಳಿದ್ದವರಲ್ಲಿ ಮಾಸಿಕ ಸ್ರಾವ ಅತ್ಯಂತ ನೋವಿನಿಂದ ಕೂಡಿರುತ್ತದೆ. ಈ ತೊಂದರೆಗಳು ಗರ್ಭಾಶಯವನ್ನಷ್ಟೇ ಅಲ್ಲದೆ, ಇಡೀ ದೇಹದ ಮೇಲೆ ಬೀರುವ ಅಡ್ಡ ಪರಿಣಾಮಗಳ ಅಧ್ಯಯನ ಇಂದು ಕೂಡ ನಡೆಯುತ್ತಿದೆ. ಈ ನೋವನ್ನು ಮಹಿಳೆಯರು ಹಲ್ಲು ಕಚ್ಚಿ ಸವೆಸಿಬಿಡುತ್ತಿರುವ ಕಾರಣ, ವೈದ್ಯಕೀಯ ರಂಗಕ್ಕೂ ಈ ಬಗ್ಗೆ ಪೂರ್ಣ ಅರಿವಿಲ್ಲ. ಈ ತೊಂದರೆಗಳಿರುವವರ ಮಾಸಿಕ ನೋವುಗಳು ಒಬ್ಬರಿಂದ ಇನ್ನೊಬ್ಬರಿಗೆ ಭಿನ್ನವಾಗಿರುತ್ತವೆ. ಈ ನೋವಿನ ಆಳವನ್ನು ಅಳೆಯುವ ವಿಧಾನಗಳ ಆವಿಷ್ಕಾರವಾಗಿಲ್ಲ. ಇದು ಬಂಜೆತನಕ್ಕೆ, ಅರೆಬಂಜೆತನಕ್ಕೆ ಕಾರಣವಾಗುತ್ತಿರುವ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನಗಳು ನಡೆಯಬೇಕಿದೆ.

‘ಮೇಲಿನ ತೊಂದರೆಗಳಿರುವವರು ಶೇ. 5ಕ್ಕಿಂತ ಕಡಿಮೆಯಿದ್ದಾರೆ, ಹಾಗಾಗಿ ಮುಟ್ಟಿನ ರಜೆಯ ಅವಶ್ಯಕತೆ ಇದೆಯೇ?’ ಎನ್ನುವವರಿಗೆ, ದೇಶದ ಶೇ. 75 ಮಹಿಳೆಯರ ಉದ್ಯೋಗದ ಸ್ಥಳಗಳಲ್ಲಿ ಇರುವ ಅಮಾನವೀಯ ಸೌಲಭ್ಯಗಳು ಮತ್ತು ಪರಿಸ್ಥಿತಿಗಳ ಪೂರ್ಣ ಚಿತ್ರಣಗಳ ಅರಿವಿದೆಯೇ ಎಂದು ಪ್ರಶ್ನಿಸಬೇಕಾಗಿದೆ.

## ಮುಟ್ಟಿನ ಸುತ್ತಲ ಚರ್ಚೆಗಳು

ಹೆಣ್ಣು ಎಂದೊಡನೆ ಆಕೆಯ ಸುತ್ತ ನಡೆವ ರಾಜಕೀಯಗಳು, ಹಗರಣಗಳಿಗೆ ಮಿತಿಯಿಲ್ಲ. ಆಕೆಯೊಬ್ಬಳಿಗೆ ಆಗಬಹುದಾದ ಮುಟ್ಟಿನ ಸುತ್ತ ಚರಿತ್ರೆಯುದ್ದಕ್ಕೂ ಹಗರಣಗಳು ನಡೆದಿವೆ. ಪಾಶ್ಚಾತ್ಯ ದೇಶಗಳಿಂದ ಪೌರ್ವಾತ್ಯ ದೇಶಗಳವರೆಗೆ